ಶ್ರೀ ಎ ಪಿ. ಅಪ್ಪಣ್ಣ:— ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಸದಸ್ಯರು ಎಲ್ಲಿ ನೀರಿನ ಆಭಾವವಿದೆ, ಎಲ್ಲಿ ಭೂಗರ್ಭ ದಲ್ಲಿರುವ ನೀರನ್ನು ಕಂಡುಹಿಡಿದು ಅನುಕೂಲ ಮಾಡಬೇಕು ಎಂದು ಹೇಳುತ್ತಿದ್ದಾರೆ ಅದನ್ನು ಗಮನಿಸಿ ಸಂಬಂಧಪಟ್ಟ ಇಲಾಖೆಯವರು ೨೭ ತಾಲ್ಲೂಕುಗಳಲ್ಲಿ ಸರ್ವೆ ಮಾಡಿದ್ದಾರೆ. ಇನ್ನುಮುಂದೆ ಬೇರೆ ಯಾವ ತಾಲ್ಲೂಕುಗಳಲ್ಲಾದರೂ ಕುಡಿಯುವ ನೀರಿನ ಆಭಾವವಿರುವ ಕಡೆ ಆ ಸರ್ವೆ ಮಾಡಬೇಕೆಂದರೆ ಮುಂದೆ ಸರ್ವೆಮಾಡುವಾಗ ಅದನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಎಂದು ಭರವಸೆ ಕೊಡುತ್ತೇನೆ.

ಶ್ರೀ ಎ.ಮುನಿಯಪ್ಪ:— ಭೂಗರ್ಭದಲ್ಲಿರುವ ನೀರು ಪೋಲಾಗಿ ಸಮುದ್ರಕ್ಕೆ ಹೋಗುವುದನ್ನು ತಡೆಗಟ್ಟಿ ಡ್ಯಾಂ ಕಟ್ಟಲು ಸಲಹೆ ಮಾಡಿರುವರೇ ?

ಶ್ರೀ ಎ.ಪಿ.ಅಪ್ಪಣ :— ಮಾನ್ಯ ಸದಸ್ಯರು ಅಂಡರ್‌ಗ್ರೌಂಡ್ ಇಂಜಿನಿಯರಾಗಿ ಬಂದರೆ ಅದನ್ನು ಆಲೋಚನೆಮಾಡಬಹುದು.

ಶ್ರೀ ಎ.ಮುನಿಯಪ್ಪ:— ಬೇರೆ ದೇಶಗಳಲ್ಲಿ ಹಾಗೆ ಮಾಡಿರುವಾಗ ಮೈಸೂರಿನಲ್ಲೇಕೆ ಮಾಡಲು ಆಗುವುದಿಲ್ಲ ?

ಶ್ರೀ ಎ.ಪಿ.ಅಪ್ಪಣ್ಣ:— ಈಗ ಭೂಮಿಯ ಮೇಲಿರುವ ನೀರನ್ನೇ ಪೂರ್ಣವಾಗಿ ಉಪಯೋಗಿಸುವುದಕ್ಕೆ ಆಗದಿರುವಾಗ ಭೂಮಿಯೊಳಗಿರುವ ನೀರಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದಂತೆ ಮಾಡುವ ಸಂದರ್ಭ ಬಂದಿಲ್ಲ.

OPENING OF BUS DEPOT AT LAKSHMESWAR

264 SRI SIDDAIAH KASIMATH (Shirahatti):—

Will the Minister for Transport be pleased to state:—

(*a*) whether Mysore State Road Transport Corporation has contemplated to open new depots.

(*b*) if so, whether there is a proposal to open a depot at Lakshmeswar and when it will be opened ?

Sri MOHAMED ALI:—(Minister for Transport)

(*a*) Not at present.

(*b*) Does not arise in view of reply to (*a*).

SRI SIDDAIAH KASIMATH:— May I know whether there is any proposal to open an M.S.R.T.C. Depot at Lakshmeshwar?

SRI MOHAMED ALI:— I do not think there is any proposal. When the hon. Member had written to me about this, I replied that the matter wuold be examined. Subsequently it was found that it is too early to start a Depot there is no need. because there is no need.

SRI SIDDIAH KASIMATH:— Will it not be possible to open a Depot on a temporary basis ?